ಓ.ಎಸ್. ನಂಃ 156/2017

**ಪಿಡಬ್ಲ್ಯೂಃ1**

**ದಿನಾಂಕಃ 21.10.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಕೆ.ಎಸ್ ವಕೀಲರಿಂದಃ**

1. ಮಧುವನಹಳ್ಳಿಯಲ್ಲಿ ಪ್ರತಿ ನಿವೇಶನಕ್ಕೆ ಒಂದು ಚದರ ಅಡಿಯ ಸಬ್ ರೆಜಿಸ್ಟಾರ್ ವ್ಯಾಲುವೆಶನ್ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಹೂಡುವ ಕೆಲವು ದಿನಗಳ ಹಿಂದೆ ದಾವಾ ಬಿ ಅನುಸೂಚಿ ಆಸ್ತಿಯನ್ನು ಪ್ರತಿವಾದಿಯರು ಒತ್ತುವರಿ ಮಾಡಿರುತ್ತಾರೆ. ನಿಪಿ.1 ರಡಿಯಲ್ಲಿ ನನ್ನ ತಂದೆಯಾದ ಬೊರಲಿಂಗನಾಯಕರು ಮಂಚನಾಯಕ ಬಿನ್ ಮಂಚನಾಯಕರಿಂದ ಏಳೂವರೆ ಗಜ ನಿವೇಶನವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ.

2. ನಿಪಿ.1 ರಡಿಯಲ್ಲಿ ಖರೀದಿ ಮಾಡದ ಏಳೂವರೆ ಗಜ ನಿವೇಶನವನ್ನು ನನ್ನ ತಂದೆಯವರು ಅಳತೆ ಮಾಡಿಸಿ ಗಡಿ ಗುರುತು ಮಾಡಿಸಿರುತ್ತಾರೆ. ಸದರಿ ಏಳೂವರೆ ಗಜ ನಿವೇಶನವನ್ನು ನನ್ನ ತಂದೆಯವರು ಅಳತೆ ಮಾಡಿ ಗಡಿ ಗುರುತು ಮಾಡಿದ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಎ ಅನುಸೂಚಿ ಆಸ್ತಿಯ ಪೂರ್ವ ದಿಕ್ಕಿಗೆ ಪ್ರತಿವಾದಿಯ ಮನೆ ಇರುತ್ತದೆ.

3. ನಿಪಿ.2 ರ ಖರೀದಿ ಪತ್ರದ ಅನುಸೂಚಿ ಆಸ್ತಿಯ ಪೂರ್ವ ದಿಕ್ಕಿಗೆ ಅಜ್ಜನಾಯಕನ ಹಿತ್ತಲು ಮತ್ತು ಗಿರಿಯಮ್ಮನ ಮನೆ ಇರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ.2 ರ ಖರೀದಿ ಪತ್ರದ ಮೂಲಕ ನನ್ನ ತಂದೆಯವರು ಆರೂವರೆ ಗಜ ನಿವೇಶನವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಆರೂವರೆ ಗಜ ನಿವೇಶನವು 19.06 ಅಡಿ ಆಗುತ್ತದೆ ಎಂದರೆ ಸರಿ. ಏಳೂವರೆ ಗಜ ನಿವೇಶನವು 22.06 ಅಡಿ ವಿಸ್ತೀರ್ಣವಾಗುತ್ತದೆ ಎಂದರೆ ಸರಿ. ನಿಪಿ.1 ಮತ್ತು 2 ರಡಿಯಲ್ಲಿ ಖರೀದಿ ಮಾಡಿದ ವಿಸ್ತೀರ್ಣದ ನಿವೇಶನವು ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಎ ಅನುಸೂಚಿ ಆಸ್ತಿಯ ದಕ್ಷಿಣೋತ್ತರವಾಗಿ 80 ಅಡಿ ವಿಸ್ತೀರ್ಣದ ನಿವೇಶನ ಇರುವುದಿಲ್ಲ ಎಂದರೆ ಸರಿಯಲ್ಲ.

4. ನಿಪಿ.1 ಮತ್ತು ನಿಪಿ.2 ರ ಖರೀದಿ ಪತ್ರಗಳ ಅಡಿಯಲ್ಲಿ ನನ್ನ ತಂದೆಯವರು ಕೇವಲ 42 ಅಡಿ 2 ಇಂಚು ನಿವೇಶನವನ್ನು ಖರೀದಿ ಮಾಡಿದ್ದರೂ ಸಹ ನಾನು ಈ ದಾವೆಯನ್ನು 46x80 ಅಡಿ

ವಿಸ್ತೀರ್ಣದ ನಿವೇಶನದ ಸಂಬಂದ ಹೂಡಿರುತ್ತೇನೆ ಎಂದರೆ ಸಾಕ್ಷಿಯು ದಾವಾ ಎ ಅನುಸೂಚಿ ಆಸ್ತಿಯ ವಿಸ್ತೀರ್ಣವು 46x80 ಇರುತ್ತದೆ ಎಂದು ನುಡಿದಿರುತ್ತಾರೆ. ನಿಪಿ.1 ಮತ್ತು 2 ರ ಖರೀದಿ ಪತ್ರಗಳಲ್ಲಿ ಖರೀದಿ ಮಾಡಿರುವ ನಿವೇಶನಗಳನ್ನು ಹೊರತುಪಡಿಸಿ ನನ್ನ ತಂದೆಯವರು ಬೇರೆ ಯಾವುದೇ ನಿವೇಶನಗಳನನ್ನು ಖರೀದಿ ಮಾಡಿರುವುದಿಲ್ಲ. ನನ್ನ ತಂದೆಯವರು ಕೇವಲ 42 ಅಡಿ 2 ಇಂಚು ನಿವೇಶನವನ್ನು ಖರೀದಿ ಮಾಡಿದ್ದರೂ ಸಹ ಪ್ರತಿವಾದಿಯ ನಿವೇಶನವನ್ನು ಕಬಳಿಸುವ ಉದ್ದೇಶದಿಂದ ನಾನು ಹೆಚ್ಚಿನ ವಿಸ್ತೀರ್ಣವನ್ನು ತೋರಿಸಿ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಎ ಅನುಸೂಚಿ ಆಸ್ತಿಗೆ ಸಂಬಂದಪಟ್ಟ ದಾಖಲೆಗಳನ್ನು ನೋಡಿದ ನಂತರದಲ್ಲಿಯೇ ಈ ದಾವೆಯನ್ನು 46x80 ಅಡಿ ವಿಸ್ತೀರ್ಣದ ನಿವೇಶನಕ್ಕೆ ಸಂಬಂದಪಟ್ಟ ಹಾಗೆ ಸಲ್ಲಿಸಿರುತ್ತೇನೆ.

**ಮರುವಿಚಾರಣೆ ಇರುವುದಿಲ್ಲ**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**